(Smt. G. C. BHAGEERATHAMMA)

(*b*) if so, why the possession of land was not given to the villagers;

(*c*) whether they would expedite the handing over of possession early ?

A.—Sri M. V. KRISHNAPPA (Minister for Revenue).—

(*a*) Yes.

(*b*) For non-availability of relevant vernacular records readily.

(*c*) Possession of the acquired land was given to the concerned Village Panchayat on 22nd October 1965.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಇದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು ಯಾವ ಭಾಷೆಯಲ್ಲಿವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ಕನ್ನಡದಲ್ಲಿವೆ, ಮತ್ತೆ ಕೆಲವು ಇಂಗ್ಲೀಷಿನಲ್ಲಿವೆ, ಹೈದರಾಬಾದು ಪ್ರದೇಶದವು ಉರ್ದುವಿನಲ್ಲಿವೆ.

ಶ್ರೀ ಕೆ. ಲಕ್ಕಪ್ಪ.—ಇದು ಯಾವ ಗ್ರಾಮ ಪಂಚಾಯಿತಿಗೆ ಸೇರಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ವೆಂಗಲಮ್ಮನಹಳ್ಳಿ ಕೊರಟಗೆರೆ ತಾಲ್ಲೂಕಿನಲ್ಲಿಲ್ಲ ಎಂಬುದು ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಕೇಳಿರುವ ಹೆಸರು ಬೇರೆ ಇರಬಹುದು, ನಮಗೆ ಬಂದಿರುವ ವರದಿ ಪ್ರಕಾರ ಉತ್ತರ ಕೊಟ್ಟಿರುವುದು ಸರಿಯಾಗಿದೆ.

Amendments to Prohibition Act.

*೪.—82. Sri B. BHASKARA SHETTY (Kaup).—

Will the Government be pleased to state :—

(*a*) whether they have decided to amend the Prohibition Act to effect savings to meet the present grave sitnaction in the country;

(*b*) if so, the salient features of the amendments proposed;

(*c*) when these changes would be given effect to ?

A.—Sri RAMAKRISHNA HEGDE (Minister for Finance).—

(*a*) No.

(*b*) and (*c*) Does not arise in view of reply to (*a*).

ಶ್ರೀ ಬಿ. ಭಾಸ್ಕರ ಶೆಟ್ಟಿ.—ಪಾನನಿರೋಧ ಕಾನೂನನ್ನು ತಿದ್ದುಪಡಿ ಮಾಡದಿದ್ದರೆ ಶ್ರೀಮತಿ ಯಶೋಧರಮ್ಮನವರೇಕೆ ಮಂತ್ರಿಪದವಿಗೆ ರಾಜೀನಾಮೆ ಕೊಡುತ್ತಿದ್ದರು ?

Mr. SPEAKER.—The question is disallowed. The Minister's resignation does not come under a supplementary. Discussion on Governor's Address is there and policy matters can be discussed then.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಪಾನನಿರೋಧದ ನೀತಿಯನ್ನು ಬದಲಾಯಿಸಿರುವುದರಿಂದ ಸರ್ಕಾರಕ್ಕೆ ಎಷ್ಟು ರೆವಿನ್ಯೂ ಬರಬಹುದೆಂಬ ಅಂದಾಜು ಮಾಡಲಾಗಿದೆ ?

†ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ, ಸುಮಾರು 50 ಲಕ್ಷದಿಂದ ಒಂದು ಕೋಟಿ ರೂಪಾಯಿಗಳವರೆಗೆ ಬರಬಹುದು.

ಶ್ರೀ ಬಿ. ಭಾನ್ಯರಶೆಟ್ಟಿ.—ಎರಡನೆಯ ಹಂತವಾಗಿ ಹೆಂಡ ಮಾರಾಟಮಾಡಲು ಅವಕಾಶ ಕೊಡುವ ಉದ್ದೇಶವಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಪಾನನಿರೋಧ ಕಾಯಿದೆಯಲ್ಲಿ ಹೆಂಡಮಾರುವ ಅಂಗಡಿಗಳಿಗೆ ಅವಶ್ಯಕವಿರುವ ಕಡೆ ಲೈಸೆನ್ಸ್ ಕೊಡಲು ಅವಕಾಶವಿದೆ.

Sri H. R. KESHAVA MURTHY.—When you are following the British Parliamentary procedure, why not you adopt the policy followed by the British Government ?

Mr. SPEAKER.—The question is not allowed.

Sri C. J. MUCKANNAPPA.—What is the income that the Finance Minister is expecting to get ?

Sri RAMAKRISHNA HEGDE.—I have already stated that it will be very difficult to estimate precisely what would be the revenue from issuing permits on health grounds. As I said, it is estimated that the income would be somewhere Rs. 50 lakhs and 1 crore.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಹೊಸ ನೀತಿಯೆಂದು ಎಷ್ಟು ಹೆಚ್ಚು ಖರ್ಚಾಗಬಹುದು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹೊಸ ಸಿಬ್ಬಂದಿ ನೇಮಕಮಾಡುವುದಿಲ್ಲವಾದ್ದರಿಂದ ಹೆಚ್ಚು ಖರ್ಚಾಗುವುದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ್.—ಇದು ಜಾರಿಗೆ ಬಂದ ಮೇಲೆ ಹೊಸದಾಗಿ ಎಷ್ಟು ಲೈಸನ್ಸು ಗಳನ್ನು ಕೊಡಲಾಗಿದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದುವರೆಗೆ ಲೈಸೆನ್ಸ್ ಯಾವುದೂ ಕೊಟ್ಟಿಲ್ಲ, ಅರ್ಜಿ ಬಂದರೆ ಯೋಚನೆಮಾಡಿ ಕೊಡಲಾಗುವುದು.

Sri S. SHIVAPPA.—Is it the intention of the Government to liberalise the law by amending the rules instead of amending the Act ?

Sri RAMAKRISHNA HEGDE.—If the Government thinks that it is desirable to amend the Act, it will certainly come before the House.

Sri C. J. MUCKANNAPPA.—Now the Deputy Commissioners are receiving a number of applications for licences. Do Government restrict the issue of licences to various individuals or are they liberal about issue of permits ?

Sri RAMAKRISHNA HEGDE.—Every case will be decided on merit. How can I say whether we will be liberal or restricted ?

ಶ್ರೀ ಅಂದಾನಯ್ಯ.—ಹೆಲ್ತ್ ಗ್ರೌಂಡ್ಸ್ ಮೇಲೆ ಪರ್ಮಿಟ್ ತೆಗೆದುಕೊಳ್ಳಬೇಕಾದರೆ ಡಾಕ್ಟರು ಹತ್ತಿರ ಹೋಗಿ ಅವರ ಪರ್ಮಿಷನ್ ತೆಗೆದುಕೊಂಡು ಪರ್ಮಿಟ್ಸ್‌ಗೆ ಅಪ್ಲೈ ಮಾಡ ಬೇಕೆಂದಿದೆ. ಈಗ ಡಾಕ್ಟರು ಹತ್ತಿರ ಹೋಗಿ ಅವರಿಗೆ ಲಂಚ ಕೊಡುವುದು ಜಾಸ್ತಿಯಾಗಿದೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಪರ್ಯಾಲೋಚನೆ ಮಾಡುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಡಾಕ್ಟರು ಹತ್ತಿರ ಹೋಗೇ ಇಲ್ಲ. ಲಂಚ ಹೇಗೆ ಪುರು ಆಯಿತು!

Sri C. J. MUCKANNAPPA.—You were rather reluctant to tell us what are all the grounds that are taken into consideration for issue of individual permits. Has it come to the notice of the Government that Doctors went on deputation to Government to point out that relaxation of prohibition rules is going to harm the people ?

Mr. SPEAKER.—I do not understand how relaxation comes under this Question.

Sri C. J. MUCKANNAPPA.—It arises thus : a number of permits are asked for ; I want to know whether they will be liberal or going to restrict them.

Mr. SPEAKER.—I do not say the point is irrelevant. But it does not arise as a supplementary under this Question.

Sri C. J. MUCKANNAPPA.—When we expect the revenue to the tune of Rs. 50 lakhs to one crore, the number of permites must be increased.

Mr. SPEAKER.—It does not come to the question of relevancy. The Member may put a separate question. The Chair will admit it immediately.

ಶ್ರೀ ಬಿ. ಬೈರಪ್ಪಾಜಿ.—ಈ ಆಕ್ಟನ್ನು ಪೂರ್ತಿಯಾಗಿ ಸ್ಯಾಬ್ಯ್ರವ್ ಮಾಡಿ ಯಾರು ಬೇಕಾದರೂ ಕುಡಿದುಕೊಳ್ಳಲಿ ಎಂದು ಸರ್ಕಾರದವರು ಏತಕ್ಕೆ ಆದಷ್ಟು ಬೇಗ ತೀರ್ಮಾನ ಮಾಡಬಾರದು ?

Mr. SPEAKER.—It is not allowed.

Sri GANJI VEERAPPA.—May I know what Government have done ? Is it mere framing of the rules under the Act or does it mean any change in the prohibition policy ?

Mr. SPEAKER.—How does it arise ? The question that is put is whether the Government propose to amend the Act and the answer is 'no'. But the Members want salient features of the amendments which are never proposed in the main question. That is all imaginary.

ಶ್ರೀ ಸಿದ್ದಯ್ಯ ಕಾಶೀಮಠ್.—ನಿಯಮಗಳನ್ನು ಜಾರಿಗೆ ತಂದನಂತರ ರಾಜ್ಯದಲ್ಲಿ ಅವಕ್ಕೆ ಪೂರ್ಣ ವಿರೋಧ ವ್ಯಕ್ತಮಾಡುವುದರಿಂದ ಈ ಕಾನೂನನ್ನು ವಾಪಸ್ಸು ತೆಗೆದುಕೊಳ್ಳುತ್ತೀರಾ ?

Mr. SPEAKER.—It is disallowed.

ಶ್ರೀ ಬಿ. ಭಾನ್ಯರಶೆಟ್ಟಿ.—ಈ ಕಾನೂನಿಗೆ ತಿದ್ದುಪಡಿ ಮಾಡದೆ ಇದ್ದರೆ ಏತಕ್ಕಾಗಿ ಜನರು ಸತ್ಯಾಗ್ರಹ ಮಾಡಬೇಕಾಗಿತ್ತು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆ ವಿಚಾರವನ್ನು ಅವರ ಹತ್ತಿರವೇ ಕೇಳಬೇಕು.

ಶ್ರೀ ಬಿ. ಬೈರಪ್ಪಾಜಿ.—ಕೇಂದ್ರ ಸರ್ಕಾರ ನೇಮಿಸಿದಂಥ ತೇಕ್‌ಚಂದ್ ಕಮಿಟಿಯ ಶಿಫಾರ್ಸಿಗೆ ಅನುಗುಣವಾಗಿ ಈ ಕಾಯಿದೆಯನ್ನು ಮಾರ್ಪಾಡುಮಾಡಿದ್ದೀರಾ ?

Mr. SPEAKER.—How does it arise here ?

Sri C. J. MUCKANNAPPA.—The Chief Minister and the Finance Minister gave us a promise on the floor of this House that by relaxing prohibition rules, we get money for developmental work. There is so much of agitation outside. Do the Government stick to the decision that they have taken or are they going to withdraw the decision because of agitation in the country ?

Sri RAMAKRISHNA HEGDE.—There is no question of withdrawing the rules that have been published. I still maintain that so far the Government have not deviated fundamentally from the prohibition policy and that matter is still under consideration.

ಶ್ರೀ ಎನ್. ಎಂ. ಗುರೆಡ್ಡಿ.—ಪ್ರೊಹಿಬಿಷನ್ ಆಕ್ಟನ್ನು ತಿದ್ದುಪಡಿ ಮಾಡುವಾಗ ಕೇವಲ ಹಣಕ್ಕಾಗಿ ತಿದ್ದುಪಡಿ ಮಾಡುತ್ತೀರಾ ?

Mr. SPEAKER.—There is no amendment before the House.

ಶ್ರೀ ಎಸ್. ಎಂ. ಗುರೆಡ್ಡಿ.—ಹೊಸ ರೂಲ್ಸ್ ತಯಾರು ಮಾಡುವಾಗ ನಮ್ಮ ರಾಜ್ಯಕ್ಕೆ ಹಣ ಬೇಕು ಎನ್ನುವ ಇರಾದೆಯಿಂದ ಮಾಡಿದ್ದು ಆಗಿದೆಯೋ ಅಥವಾ ರಾಜ್ಯದಲ್ಲಿ ಕುಡುಕರ ಸಂಖ್ಯೆ ಹೆಚ್ಚಾಗಿ ಅವರ ಪ್ರಕೃತಿ ಹಾಳಾಗುತ್ತಿದೆ ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ರೂಲ್ಸನ್ನು ತಯಾರು ಮಾಡರಾಗಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆ ಎರಡು ದೃಷ್ಟಿಯಿಂದಲೂ ಮಾಡಿಲ್ಲ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಅನೇಕ ಜನಗಳು ತಾವು ಮಾಡಿರತಕ್ಕ ಕಾನೂನಿಗೆ ವಿರೋಧವಾಗಿ ಪಾನ ಮಾಡುವುದರಿಂದ ಜನಗಳ ದೃಷ್ಟಿಯಿಂದ ರೂಲ್ಸು ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ಗಮನಿಸರಾಗುವುದು.

Sri P. F. D'MELLOW.—Is Government aware that this policy of relaxation on medical ground is fully supported by the greater majorits of medical opinion throughout the world ? Have the Government beey pleased to state that they are relaxing the rules to allow more permitn on medical ground ?

Mr. SPEAKER.—That matter is not before the House. There is no scope for any supplementaries. But they are very good points for debate, on a resolution or any other motion on the subject.

ಶ್ರೀ ಆರ್. ಮುನಿಸ್ವಾಮಿ.—ಹೊಸ ರೂಲ್ಸನ್ನು ಜಾರಿಗೆ ತರುವುದರಿಂದ ಬಹಳ ಜನರು ಕುಡಿಯುತ್ತಾರೆ ಎನ್ನುವುದು ಗೊತ್ತೆ ?

Mr. SPEAKER.—That is hypothetical.

ಶ್ರೀ ಎಸ್. ಶಿವಪ್ಪ.—ಮದ್ಯ ನಿಷೇಧ ಕಾನೂನಿಗೆ ಯಾವ ತಿದ್ದುಪಡಿಯನ್ನೂ ತರುವುದಿಲ್ಲವೆಂದು ಸ್ಪಷ್ಟವಾಗಿ ಸರ್ಕಾರದ ಪರವಾಗಿ ಹೇಳಿರತಕ್ಕ ಮಂತ್ರಿಗಳು ಕೆಲವು ನಿಬಂಧನೆಗಳ ಸಡಿಲಿಕೆಯಿಂದ ಅರ್ಧ ಕೋಟಿ ರೂಪಾಯಿಗಳಷ್ಟು ಆದಾಯ ಬರುತ್ತದೆ ಎಂದು ಸ್ಪಷ್ಟ ಪಡಿಸಿರುತ್ತಾರೆ. ಕಾನೂನಿನಲ್ಲಿ ಏನು ನೀತಿ ಇದೆಯೋ ಅದನ್ನು ರೂಲು ಮಾಡುವ ಮುಖಾಂತರ ಮುರಿದರೆ ಕಾನೂನು ಭಂಗ ಆಗುವುದಿಲ್ಲವೇ ?

Mr. SPEAKER.—I am not aware of any rule which permits this to be brought before the House during the Question Hour.

Sri S. SIVAPPA.—What could have been achieved by an amendment of the Act, can it be achieved by liberalising the rules ?

Mr. SPEAKER.—It is a pure comment. If it relates to the Act, I can allow it. But if the supplementary relates to rules, members may please bring in a fresh question.

1-30 P.M.

ಶ್ರೀ ಬಿ. ಭಾನ್ಕರಶೆಟ್ಟಿ.—ಈ ಪರ್ಮಿಟ್ ಸಿಸ್ಟಂನಿಂದ ಇನ್ನಿತರ ಮಾದಕ ಪದಾರ್ಥಗಳು ಜಾಸ್ತಿಯಾಗಿ ಕಳ್ಳಭಟ್ಟಿ ತರಾಬು ಕಮ್ಮಿ ಮಾಡುವುದರಿಂದ ಈ ಕಾನೂನು ಪ್ರಯೋಜನಕ್ಕೆ ಬರುವುದಿಲ್ಲ ಎಂಬ ಅಂಶವನ್ನು ತಾವು ಮನಗಂಡಿದ್ದೀರಾ ?

Mr. SPEAKER.—It does not arise.

Sri H. R. KESHAVA MURTHY.—On a point of order, Sir. The Government under the Act is empowered to frame rules. Thereby the rules form part of the Act. Why should not the questions on rules be allowed ?

Mr. SPEAKER.—The hon'ble member has thrown considerable light which will not solve the problem. If the rules have been framed and if they become part of the Act, the question of amendment does not come in. Does the Government propose to amend the Act? Next Question.

Post of Assistant Advocate-General

*Q.—113. Sri ANDANAIAH (Kunigal).—

Will the Government be pleased to state :—

(*a*) since how many years the post of Assistant Advocate-General is vacant in the High Court of Mysore ;

(*b*) the reasons for keeping the post vacant ?

A.—Sri S. NIJALINGAPPA (Chief Minister).—

(*a*) Since 18th September 1963.

(*b*) In view of the number of High Court Government Pleaders being increased from six as on 17th September 1963 to nine, on 2nd June 1964, Government have not considered it necessary to fill up the post of Assistant Advocate-General.

ಶ್ರೀ ಅಂದಾನಯ್ಯ.—ತಾವು (ಬ) ಪ್ರಶ್ನೆಗೆ ಉತ್ತರವಾಗಿ ಹೈ ಕೋರ್ಟ್ ಪ್ಲೀಡರುಗಳ ಸಂಖ್ಯೆಯನ್ನು 6 ರಿಂದ 9 ಕ್ಕೆ ಹೆಚ್ಚಿಸಿದ್ದೇವೆ ಆದ್ದರಿಂದ ಅಸಿಸ್ಟೆಂಟ್ ಅಡ್ವೋಕೇಟ್ ಜನರಲ್‌ರವರ ಹುದ್ದೆ ಅವಶ್ಯಕವಿಲ್ಲ ಎಂದು ಹೇಳಿದ್ದೀರಿ. ಈ ಬಗ್ಗೆ ತಮಗೆ ಹೈ ಕೋರ್ಟಿನಿಂದ ಏನಾದರೂ ವರದಿ ಬಂದಿದೆಯೇ ?

† ಶ್ರೀ ಎಸ್. ನಿಜಲಿಂಗಪ್ಪ.—ಹೈ ಕೋರ್ಟಿನಿಂದ ವರದಿ ಬರಬೇಕಾದ್ದಿಲ್ಲ.

ಶ್ರೀ ಅಂದಾನಯ್ಯ.—ಬೇಕೇ ಬೇಡವೇ ಅನ್ನುವುದಕ್ಕೆ.....

Mr. SPEAKER.—They are not to decide. The Government decides whether half a dozen pleaders are necessary or not.

Sri K. LAKKAPPA.—In view of the enormous increase in the work, is it not desirable to fill up the vacancies ?

Sri S. NIJALINGAPPA.—The number of pleaders have increased from six to nine just to meet the increase in the workload.

ಶ್ರೀ ಅಂದಾನಯ್ಯ.—ಅಸಿಸ್ಟೆಂಟ್ ಅಡ್ವೋಕೇಟ್ ಜನರಲ್ ಅವರ ಹುದ್ದೆಯ ಅವಶ್ಯಕತೆ ಇಲ್ಲ ಎಂದು ಹೇಳಿದ ಮೇರೆ ಈ ಹುದ್ದೆಯನ್ನು ರದ್ದು ಮಾಡಿದ್ದೀರಾ ಅಥವಾ ಹಾಗೆಯೇ ಇಟ್ಟು ಕೊಂಡಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ನದ್ಯಕ್ಕೆ ನೇಮಕ ಮಾಡಿಲ್ಲ.

Mr. SPEAKER.—It is a matter of convenience for distribution of work and co-ordination.

Sri C. J. MUCKANNAPPA.—May I know when the Government appoints the Advocate General or Assistant Advocate General, what is the quantum of workload taken into consideration ?